Irrigation wells in Chikodi Taluk

38 Sri J. S. AMMANNAVAR (Sadalga).—

Will the Minister for Rural Development and Social Welfare be pleased to state :—

(*a*) the details of village-wise irrigation wells in Chikodi Taluk ;

(*b*) the number of irrigation wells fitted with Electric Pumps and Diesel Engine ;

(*c*) whether there is any scheme or plan before the Government to supply electricity to all the wells taking into consideration the high prices and shortage of diesel and other oils in the country ?

Sri S. M. KRISHNA (Minister for Industries and Parliamentary) on behalf of SRI N. RACHAIAH (Minister for Rural Development and Social Welfare).—

(*a*) List in respect of wells sanctioned by the Primary Land Development Bank, Chikodi is placed on the Table of the House Copy placed in the Karnataka Legislature Library Vide No. 5/13-2-1975

(*b*) 185 Electric Pumpsets and 96 Diesel Pumpsets are financed by the co-operatives.

(*c*) Under examination

ಶ್ರೀ ಜಿ. ಎಸ್. ಅಮ್ಮಣ್ಣನವರ್.—ನನ್ನ (ಅ) ಪ್ರಶ್ನೆಗೆ ಇಲ್ಲಿ ಉತ್ತರಕೊಟ್ಟಿರುವುದನ್ನು ನೋಡಿದರೆ "ಗಾಡ ಹಚ್ಚಡ ಬೇಡಿದರೆ ಕವುಡ ಕಚ್ಚಡಿ ತಂದಿಟ್ಟ" ಅಂದಹಾಗಿದೆ. ಆದುದರಿಂದ ನಾನು ಇದನ್ನೆರ್ಲಾ ಕೈಬಿಟ್ಟು ನೇರವಾಗಿ ಒಂದು ಪ್ರಶ್ನೆ ಕೇಳುವುದೆಂದರೆ ಈಗ ರಾಜ್ಯಾದ್ಯಂತ ಎಲ್ಲೆಲ್ಲೂ ಡಿಸೇಲ್ ಎಣ್ಣೆ ಬೆಲೆ ಜಾಸ್ತಿಯಾಗಿರುವುದರಿಂದ ರಾಜ್ಯದಲ್ಲಿ ಎಲ್ಲೆಲ್ಲಿ ವಿದ್ಯುಚ್ಛಕ್ತಿ ಸರಬರಾಯಿ ಆಗಿದೆಯೋ ಅಂಥ ಕಡೆಗಳಲ್ಲಾದರೂ ಕೆಲಸ ಮಾಡುತ್ತಿರುವ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸರ್ಕಾರದವರೇನು ಯೋಜನೆಯನ್ನು ಹಾಕಿಕೊಂಡಿದ್ದಾರೆ ?

†ಶ್ರೀ ಎಸ್. ಎಂ. ಕೃಷ್ಣ.—ಈ ಒಂದು ತಾಂದರೆ ಕೇವಲ ಆ ಚಿಕ್ಕೋಡಿ ತಾಲ್ಲೂಕ್ ಒಂದಕ್ಕೆ ಅಲ ವೇಶಾದ್ಯಂತವೂ ಇದೆ. ಆದರೆ ಹಾಲಿ ನಮ್ಮಲ್ಲಿ ಸಾಕಷ್ಟು ಅಲ್ಯೂಮಿನಂ ಕಂಡಕ್ಟರುಗಳು ಮತ್ತು ಪೈರ್ ಇತ್ಯಾದಿ ಮೆಟೀರಿಯರ್ಸ್ ತಾಂದರೆಯಿಂದಲೂ ಮತ್ತು ಪವರಿನ ಕೊರತೆಯಿಂದಲೂ ಈ ಕಾರ್ಯವನ್ನು ಮಾಡುವುದಕ್ಕೆ ಸ್ವಲ್ಪ ನಿಧಾನವಾಗಿದೆ. ಆದಾಗ್ಯೂ ವ್ಯವಸಾಯ ಕ್ಷೇತ್ರಕ್ಕೆ ಎಲ್ಲ ಕಡೆಯಲ್ಲೂ ಆದ್ಯತೆ ಕೊಡುತ್ತಿರುವಂತೆ ಈ ಚಿಕ್ಕೋಡಿ ತಾಲ್ಲೂಕಿಗೂ ಇವುಗಳಿಗೆ ಆದ್ಯತೆ ಕೊಡುತ್ತಿದ್ದೇವೆ.

Repairs of Jeeps Attached to B. D. O. Office

46. Sri V. M. GHADI (Haliyal)—

Will the Minister for Rural Development and Social Welfare be pleased to state.—

(*a*) whether it is a fact that the Block Development Officers are required to take the approval of the Government (A. C. or D. C.)

for the repairs of the jeeps if the repair charges go beyond a certain limit.

(*b*) if so, whether it is not a fact that much delay is caused to get the approval of the Government and the repair work is delayed;

(*c*) whether the Government has any proposal to delegate more powers to the B. D. Os. in this respect t

Sri N. RACHAIAH (Minister for Rural Development and Social Welfare)—

(*a*) Yes. Sanction of the Deputy Commissioners and the Divisional Commissioners is to be obtained.

(*b*) There may be some instances of delay at Divisional and District levels,

(*c*) No.

ಶ್ರೀ ವಿ. ಎಂ. ಘಾಡಿ.—ಮೇಲ್ಪಟ್ಟ ಅಧಿಕಾರಿಗಳಿಂದ ಜೀಪ್ ರಿಪೇರಿ ಮಾಡಿಸಲು ಮಂಜೂರಾತಿ ಪಡೆಯಲು ನಿಧಾನವಾಗುವುದು ಮತ್ತು ಪೆಟ್ರೋಲ್ ಬಗ್ಗೆ ನಿರ್ಬಂಧವಿದೆ. ಇದರಿಂದ ತೊಂದರೆಯಾಗುವುದನ್ನು ತಪ್ಪಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

† ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳಿಂದ ವರದಿ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಎಂ. ಮಂಜುನಾಥ್.—ಅನೇಕ ಜೀಪುಗಳು ಅವುಗಳನ್ನು ತೆಗೆದುಕೊಂಡು 15 ವರ್ಷಗಳಾದ ಮೇಲೆ ಉಪಯೋಗಕ್ಕೆ ಬರುವುದಿಲ್ಲ. ಅಲ್ಲದೆ ಡಿವಿಜನಲ್ ಕಮಿಷನರು ಮುಂತಾದವರು ರಿಪೇರಿಗೆ ಅನುಮತಿ ಕೊಡಲು ನಿಧಾನವಾಗುವುದು. ಇದನ್ನು ಹೋಗಲಾಡಿಸಲು ತಕ್ಷಣ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ರಾಚಯ್ಯ.- ಆಗಲೇ ಹೇಳಿದಂತೆ ಸಂಬಂಧಪಟ್ಟ ಅಧಿಕಾರಿಗಳಿಂದ ಇದರ ಬಗ್ಗೆ ವರದಿ ತರಿಸಿ ಇರುವ ತೊಂದರೆ ನಿರ್ವಹಿಸಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಮೇಲಿನವರು ರಿಪೇರಿಗೆ ಅನುಮತಿ ಕೊಡುವುದು ಗುಮಾಸ್ತರ ಕೈವಾಡದಿಂದ ನಿಧಾನವಾಗುತ್ತಿದೆ. ಇದು ಗಮನಕ್ಕೆ ಬಂದಿದೆಯೋ ? ಬಂದಿದ್ದರೆ ಅದನ್ನು ತಪ್ಪಿಸಿ ಅನುಕೂಲ ಕಲ್ಪಿಸಲು ಏನು ಕ್ರಮ ತೆಗೆದುಕೊಳ್ಳುವಿರಿ ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರು ಹೇಳಿದ್ದು ಗಮನಕ್ಕೆ ಬಂದಿಲ್ಲ. ಅದನ್ನು ಬಗ್ಗೆ ತಿಳಿಸಿದರೆ ವಿಚಾರಿಸಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಜೀಪ್ ಉಪಯೋಗ ಮಾಡುವವರು ಸಮಾಜ ಕಲ್ಯಾಣ ಇಲಾಖೆಯವರು, ರೆವೆನ್ಯೂ ಇಲಾಖೆಯವರು ಅದರ ರಿಪೇರಿಗೆ ಅನುಮತಿ ಕೊಡಬೇಕು. ಈ ಲಕೂನಾ ತಪ್ಪಿಸುವಿರಾ ?

ಶ್ರೀ ಎನ್. ರಾಚಯ್ಯ.—ಸಮಾಜ ಕಲ್ಯಾಣ ಇಲಾಖೆಯವರು ಜೀಪ್ ಉಪಯೋಗ ಮಾಡುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾಲ್ಲೂಕು ಬೋರ್ಡ್‌ನಲ್ಲಿರುವ ಜೀಪನ್ನು ಇತ್ತೀಚಿನ ಸರಕಾರಿ ಆಜ್ಞೆ ಪ್ರಕಾರ ರೆವೆನ್ಯೂ ಅಧಿಕಾರಿಗಳು ಲೆವಿ ಮತ್ತು ಕಂದಾಯ ವಸೂಲಿಗೆ ಒದಗಿಸಬೇಕು ಎಂದಿರುವುದರಿಂದ ಜೀಪಿನ ರಿಪೇರಿ ಖರ್ಚನ್ನು ರೆವೆನ್ಯೂ ಇಲಾಖೆ ವಹಿಸುವಂತೆ ಮಾಡುವುದನ್ನು ಯೋಚಿಸುವಿರಾ ?

ಶ್ರೀ ಎನ್. ರಾಚಯ್ಯ.—ಅದು ಸೂಕ್ತ ಸಲಹೆ, ಯೋಚನೆ, ಮಾಡುತ್ತೇವೆ.

ಶ್ರೀ ವಿ. ಎಂ ಘಾಡಿ.- ಹಳೆಯ ಜೀಪುಗಳಿಗೆ ಬದಲಾಗಿ ಹೊಸ ಜೀಪನ್ನು ಒದಗಿಸುವಿರಾ ? ಮತ್ತು ಬಿ. ಡಿ. ಒಗಳೇ ಅಸಿಸ್ಟೆಂಟ್ ಕಮಿಷನರು ಮುಂತಾದವರ ಅನುಮತಿಗೆ ಕಾಯದೆ ರಿಪೇರಿ ಮಾಡಿಸಲು ಅವಕಾಶ ಕಲ್ಪಿಸುವಿರಾ ?

ಶ್ರೀ ಎನ್. ರಾಚಯ್ಯ,—ಅನೇಕ ಸಂದರ್ಭಗಳಲ್ಲಿ ಬಿ. ಡಿ. ಓ. ಗಳು ದುರುಪಯೋಗ ಮಾಡುವುದು, ಸರಿಯಾಗಿ ಮೈನಸ್‌ಮೈನ್ ಮಾಡದಿರುವುದು ಮುಂತಾದ ದೂರುಗಳು ಕೇಳಿಬರುತ್ತಿರುವುದು ತಮಗೆ ತಿಳಿದೇ ಇದೆ. ಅದಕ್ಕಾಗಿ ಮೇಲಿನ ಅಧಿಕಾರಿಗಳಿಗೆ ಅನುಮತಿ ನೀಡಲು ಅಧಿಕಾರ ನೀಡಲಾಗಿದೆ. ಆ ರೀತಿ ಮಾಡುವುದಿಲ್ಲವೆಂದು ತಾವು ಸಲಹೆ ಮಾಡುವುದಾದರೆ ಪರಿಶೀಲಿಸೋಣ.

Vacant Posts in Government Junior College, Mudigere

82. **Sri G. PUTTASWAMY** (Mudigere)—

Will the Minister for Education be pleased to state.—

(*a*) the posts of lecturers and subject teachers vacant in the Government Junior College, Mudigere and since when ;

(*b*) the reasons for the Government not appointing the Physical Education Teachers to this College for the last two and half years ;

(*c*) the probable period required by the Government for appointing lecturers and teachers to this College ?

Sri M. MALLIKARJUNASWAMY (Minister for Education)—

(*a*) The following Lecturers and Teachers posts are vacant.—

(1) Biology Lecturer from 2nd September 1974 to 2nd November 1974. ... 1

(2) High School Teachers from 11th April 1974 to 31st Oct ober 1974, from 8th August 1974 to 31st October 1974. ... 2

(3) Drawing Teachers from 11th November 1974. ... 1

(4) Physical Education Teachers from 8th November 1971. 1

(*b*) This post has remained vacant due to ban on new appointments and sometimes as it was not possible for teachers transferred to other place to go there. As the ban on new appointments is relaxed in regard to appointments of teachers expeditious steps would be taken to fill up this post.

(*c*) The posts of Lecturers and Teachers have been filled up and they are as follows :—

The Biology Lecturer's post which was vacant from 2nd September 1974 has been filled up on 2nd November 1974 and the teachers posts which were vacant from 11th April 1974 and 8th August 1974 have been filled up on 31st October 1974.

Instructions have been issued to the concerned officers to take suitable steps to fill up the vacant posts.

ಶ್ರೀ ಬಿ. ಪುಟ್ಟಸ್ವಾಮಿ.—ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಯಾವ ಆದೇಶ ಕೊಡಲಾಗಿದೆ ಮತ್ತು ಈಗ ಅದರ ಪರಿಣಾಮವೇನಾಗಿದೆ ?